ತೆಗೆದುಕೊಂಡು ಯಾವುದನ್ನೂ ಮಾಡದೆ ಇರುವುದಕ್ಕಿಂತ ಎಲ್ಲಿ ಅತಿ ಶೀಘ್ರವಾಗಿ ನೀರನ್ನು ಉಪಯೋಗ ಮಾಡಲಿಕ್ಕೆ ಬರುತ್ತದೆ ಅಂಥ ಕಡೆ ಸರಿಯಾಗಿ ಉಪಯೋಗ ಮಾಡುವ ನೀತಿಯನ್ನು ಇಟ್ಟುಕೊಂಡಿದ್ದೇವೆ.

ಶ್ರೀ ಆರ್. ರಾಜೂಗೌಡ.—ಈ ಕಬಿನಿ ನಾಲೆ ಪೂರ್ಣವಾದಾಗ ಯಾವ ಯಾವ ತಾಲ್ಲೂಕುಗಳಲ್ಲಿ ಎಷ್ಟೆಷ್ಟು ಎಕರೆ ಪ್ರದೇಶಗಳು ನೀರಾವರಿಗೆ ಒಳಪಡುತ್ತವೆ ? ೧೯೮೦-೮೧ನೇ ಸಾಲಿನಲ್ಲಿ ಅಂದರೆ ೧-೪-೧೯೮೦ ರಿಂದ ೩೧-೩-೧೯೮೧ ರವರೆಗೆ ಎಷ್ಟು ಜಮೀನನ್ನು ನೀರಾವರಿಗೆ ಒಳಪಡಿಸಿದ್ದೀರಿ ಎಂಬ ಪ್ರಶ್ನೆಗೆ ಉತ್ತರ ಕೊಟ್ಟಿಲ್ಲ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ಈ ನಾಲಾ ಯೋಜನೆ ಪೂರ್ಣವಾದಾಗ ಹೆಗ್ಗಡದೇವನ ಕೋಟೆಯಲ್ಲಿ ೪೪೦೦ ಎಕರೆ, ನಂಜನಗೂಡಿನಲ್ಲಿ ೧೬೯೦ ಎಕರೆ, ಚಾಮರಾಜನಗರದಲ್ಲಿ ೩೪೦೦ ಎಕರೆ. ಎಚ್ಡಂದೂರಿನಲ್ಲಿ ೧೫೫೯೦ ಎಕರೆ, ಟಿ. ನರಸೀಪುರದಲ್ಲಿ ೩೨೪೫ ಎಕರೆ, ಕೊಳ್ಳೇಗಾಲದಲ್ಲಿ ೨೮೩೭೫ ಎಕರೆ-ಒಟ್ಟು ಒಂದು ಲಕ್ಷದ ೨ ಸಾವಿರ ಎಕರೆ ಜಮೀನು ನೀರಾವರಿಗೆ ಒಳಪಡುತ್ತದೆ.

ಶ್ರೀ ಬಿ. ಶಿವಣ್ಣ.—ಮಾನ್ಯ ಆರ್ಥ ಮಂತ್ರಿಗಳು, ಎಲ್ಲ ಯೋಜನೆಗಳನ್ನು ಒಂದೇ ಸಾರಿ ತೆಗೆದು ಕೊಂಡರೆ ಯಾವುದನ್ನೂ ಪೂರ್ಣ ಮಾಡುವುದಕ್ಕೆ ಆಗುವುದಿಲ್ಲವಾದ್ದರಿಂದ ಎಲ್ಲೆಲ್ಲಿ ಅವಶ್ಯಕತೆ ಇದೆ ಅಂಥ ಕಡೆ ತ್ವರಿತವಾಗಿ ಕಾರ್ಯಗತ ಮಾಡುತ್ತೇವೆಂದು ತಿಳಿಸಿದರು. ಹಾಗಾದರೆ priority list of projects ತಯಾರಿಸಿದ್ದೀರಾ ? ಹಾಗಿದ್ದರೆ, kindly give me a priority list of projects to be completed in all the areas.

MR. SPEAKER.—It is a separate question.

SRI B. SHIVANNA.—I am asking, if it is available.

MR. SPEAKER.—The question has arisen from the answer given by the Hon. Finance Minister. If you want a detailed information, please put a separate question and get the information.

ಶ್ರೀ ಎಸ್.ಎಂ. ಶೀರ್ನಾಳಿ ಚಂದ್ರಶೇಖರ್.—ತಿರುಪತಿಯಲ್ಲಿ ಒಂದು ಪದ್ಧತಿ ಇದೆ; ಮಂಡೆ ಬೋಳಿಸಬೇಕಾದರೆ ಒಬ್ಬೊಬ್ಬರಿಗೆ ಒಂದೊಂದು ಚೂರು-ಚೂರು ತೆಗೆದು ಕೂರಿಸುವುದು. ಆದಕ್ಕೆ ಪೆಸರೇ ತಿರುಪತಿ ಚೌರ ಅಂತ. ನಮ್ಮ ರಾಜ್ಯದ ಅನೇಕ ಯೋಜನೆಗಳೂ ಕೂಡ ಇದೇ ರೀತಿ ಆಗುತ್ತಿವೆ. ತುಂಗಭದ್ರ ಯೋಜನೆ ತೆಗೆದುಕೊಳ್ಳಿ, ಕಬಿನಿ ಯೋಜನೆ ತೆಗೆದುಕೊಳ್ಳಿ ಎಲ್ಲಿಯೂ ಪೂರ್ಣವಾಗಿ ಚಾನಲ್ ಕೆಲಸ ಆಗಿಲ್ಲ, ಜಮೀನು ಅಭಿವೃದ್ಧಿ ಆಗಿಲ್ಲ. ಈ ರೀತಿ ತಿರುಪತಿ ಚೌರ ಮಾಡುವುದಕ್ಕೆ ಬದಲು ಯಾವುದಾದರೂ ಒಂದು ಪ್ರಾಜೆಕ್ಟನ್ನು ತೆಗೆದುಕೊಂಡು ಸಂಪೂರ್ಣವಾಗಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ಮಾನ್ಯ ಸದಸ್ಯರು ಎಲ್ಲ ಆಗಬೇಕೆಂದು ಹೇಳುವಾಗ ಒಂದು ವಿಷಯ ವನ್ನು ಅವರ ಗಮನಕ್ಕೆ ತರಬೇಕಾಗಿದೆ. ಯಾರೂ ರಿಸೋರ್ಸಸ್ ಬಗ್ಗೆ ಯೋಚನೆ ಮಾಡುತ್ತಿಲ್ಲ. ವಾಟರ್ ರೇಟ್ ೮ ಕೋಟಿ ರೂಪಾಯಿ ಬರಬೇಕಾದುದು ಇದುವರೆಗೆ ಬಂದಿಲ್ಲ. ಆದನ್ನಾದರೂ ಕಲೆಕ್ಟ್ ಮಾಡಿಕೊಟ್ಟರೆ ತಾವು ಹೇಳಿದಂತಹ ಅವಧಿಯಲ್ಲಿ ಯಾವ ಯೋಜನೆಯನ್ನು ಮುಗಿಸಬೇಕೋ ಅದನ್ನು ಮುಗಿಸುತ್ತೇವೆ.

Working of Co-operative Sugar Factories in the State

255. SRI H. D. DEVE GOWDA (Holenarasipur).—Will the Minister for Co-operation be pleased to state :—

(*a*) the number of Co-operative sugar factories in the State ;

(*b*) out of this, the number of Co-operative sugar factories crushing the sugarcane at present ;

(*c*) when the remaining co-operative sugar factories will become able to crush the sugarcane and what are the inconveniences faced by them ;

(*d*) whether the co-operative sugar factories have paid the full amount of the value of sugarcane purchased by then from ryots ;

(*e*) since how many years it has not been paid and the total amount payable ;

(*f*) whether yearly audit of accounts of these co-operative sugar factories have been completed, if so, number of factories which are running under loss ?

SRI H.C. SRIKANTAIAH (Minister for Co-operation).—

(*a*) 16.

(*b*) 13.

(*c*) The remaining co-operative factories are three.

They are :			*During the year*
1. Hemavathi	...	...	1981–82
2. Haveri	...	...	1981–82
3. South Kanara	...	...	1982–83

On account of the decontrol of sugar during the year 1978 and refusal for sanction of loans by Financial Institutions, these factories were facing financial difficulties. Since the Government of India have once again formulated encouraging schemes, efforts are being made to give loans.

(*d*) A statement regarding the balance of amount payable in respect of sugarcane purchased is laid on the table (year-wise).

(*e*) Statement is placed on the table.

(*f*) Statement is placed on the table of the House.

ಶ್ರೀ ಹೆಚ್. ಎಲ್. ತಿಮ್ಮೇಗೌಡ (ಮಾನ್ಯ ದೇವೇಗೌಡರ ಪರವಾಗಿ).—ನಮ್ಮ ರಾಜ್ಯದಲ್ಲಿ ೧೩ ಸಕ್ಕರೆ ಕಾರ್ಖಾನೆಗಳಿವೆ ಎಂದು ಮಾನ್ಯ ಮಂತ್ರಿಗಳು ಅಪ್ಪಣೆ ಕೊಡಿಸಿದ್ದಾರೆ. ಆದರಲ್ಲಿ ಶ್ರೀರಾಮ ಸಹಕಾರ ಸಂಘವನ್ನು ಸಹ ಸೇರಿಸಿದ್ದಾರೆ, ಆದರೆ ಅವರಲ್ಲಿ ಟ್ರೈಯಲ್ ಕ್ರಷ್ ಮಾತ್ರ ಆಗಿದೆ, ಇದುವರೆಗೆ ಪ್ರೊಡಕ್ಷನ್ ಪ್ರಾರಂಭವಾಗಿಲ್ಲ. ಸಂಬಂಧಪಟ್ಟ ಮಂತ್ರಿಗಳಿಗೆ ಮತ್ತು ಮುಖ್ಯ ಮಂತ್ರಿಗಳಿಗೆ ಒಂದು ಪ್ಯಾಕೆಟ್ ಸಕ್ಕರೆಯನ್ನು ಕೊಟ್ಟಿರಬಹುದು. ಆದರೂ ಕೂಡ ಅದನ್ನು ಈ ಪಟ್ಟಿಯಲ್ಲಿ ಸೇರಿಸಿದ್ದೀರಿ ; ಅದು ೨ನೇ ಪಟ್ಟಿಯಲ್ಲಿ ಬರಬೇಕಾಗಿತ್ತು. ಆದ್ದರಿಂದ, ಇದಕ್ಕೆ ಏನು ಹೇಳುತ್ತೀರಿ ?

ಶ್ರೀ ಹೆಚ್. ಪಿ. ಶ್ರೀಕಂಠಯ್ಯ.—ಎಷ್ಟು ಸಕ್ಕರೆ ಸಹಕಾರ ಸಂಘಗಳು ಕಬ್ಬನ್ನು ಅರೆಯಲು ಪ್ರಾರಂಭ ಮಾಡಿವೆ ಎಂಬ ಪಟ್ಟಿಯಲ್ಲಿ ಅದನ್ನು ಸೇರಿಸಿದ್ದೇವೆ

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಮಾನ್ಯ ಮಂತ್ರಿಗಳು ಕೊಟ್ಟಿರತಕ್ಕ ಲೆಕ್ಕಪತ್ರಗಳ ಪ್ರಕಾರ ೧೩ ಕಾರಣಗಳಿಂದ ೧೦ ಕೋಟಿ ರೂಪಾಯಿಗಳ ನಷ್ಟವಾಗಿದೆ. ಸರ್ಕಾರದವರೇ ಎಲ್ಲಾ ಕಾರ್ಖಾನೆಗಳಿಗೂ ಮ್ಯಾನೇಜಿಂಗ್ ಡೈರೆಕ್ಟರ್‌ರವರನ್ನು ನೇಮಿಸಿದ್ದರೂ ಈ ನಷ್ಟ ತಪ್ಪಿಸುವುದಕ್ಕೆ ಏತಕ್ಕೆ ಆಗಲಿಲ್ಲ ? ಮತ್ತು ಈ ಬಗ್ಗೆ ಏನಾದರೂ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ಎಂದು ಕೇಳಬಯಸುತ್ತೇನೆ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಸನ್ಮಾನ್ಯ ತಿಮ್ಮೇಗೌಡರು ಹೇಳಿದಹಾಗೆ ಎಲ್ಲ ಸಕ್ಕರೆ ಕಾರ್ಖಾನೆಗಳೂ ನಷ್ಟ ಅನುಭವಿಸುತ್ತಿವೆ. ಸಾಕಷ್ಟು ಕಬ್ಬನ್ನು ಅರೆಯದೇ ಇರುವುದರಿಂದ ನಷ್ಟ ಆಗುತ್ತಿದೆ. ಎಷ್ಟು ಕಬ್ಬನ್ನು ಅರೆಯಬೇಕೋ ಅಷ್ಟು ಕಬ್ಬನ್ನು ಈ ಕಾರ್ಖಾನೆಗಳು ಅರೆಯುತ್ತಿಲ್ಲ. ಒಂದು ಸಕ್ಕರೆ ಕಾರ್ಖಾನೆಯಲ್ಲಿ ಅದು ಸಾಮರ್ಥ್ಯ ವಿರುವಷ್ಟು ಕಬ್ಬನ್ನು ಅರೆಯಲು ವ್ಯವಸ್ಥಿತವಾದ ಕ್ರಮ ತೆಗೆದು ಕೊಳ್ಳದೇ ನಷ್ಟವನ್ನು ಉಂಟುಮಾಡಿದ್ದಾರೆ. ಮೂರು ನಾಲ್ಕು ಕಾರ್ಖಾನೆಗಳು ಬಿಟ್ಟರೆ ಬಾಕಿ ಎಲ್ಲಾ ಸಕ್ಕರೆ ಕಾರ್ಖಾನೆಗಳೂ ಸಹ ಕಬ್ಬು ಸಾಲದೆ ನಷ್ಟವನ್ನು ಅನುಭವಿಸಿದೆ. ಇದಕ್ಕೆ ಯಾವರೀತಿ ಕೆಲಸ ಮಾಡಬೇಕು ಎಂಬುದನ್ನು ಯೋಚನೆ ಮಾಡಿ ಸಾಮರ್ಥ್ಯವಿರುವಷ್ಟು ಕಬ್ಬನ್ನು ಅರೆಯಲು ವ್ಯವಸ್ಥೆ ಮಾಡುತ್ತಿದ್ದೇವೆ.

SRI N. B. SIRDESAI.—Sir, is it not a fact that it is the bounden duty of the State Government to encourage Sugar Industris in the areas where there is feasibility for the well being of the state and the nation ?

SRI H. C. SRIKANTAIAH. — Definitely it is the policy of the Government.

ಶ್ರೀ ಶಿವಪ್ಪ.—ಸಕ್ಕರೆ ಕಾರ್ಖಾನೆಗಳು ಸಾಮರ್ಥ್ಯಕ್ಕೆ ತಕ್ಕಂತೆ ಕಬ್ಬು ಅರೆಯಲಿಲ್ಲವೆಂಬ ಮಾತನ್ನು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಇದಕ್ಕೆ ಕಾರಣ ಸರಿಯಾಗಿ ಕಬ್ಬು ಸಿಗದೇ ಇರುವುದು. ಆದ್ದರಿಂದ ಸರ್ಕಾರ ಇದರ ಬಗ್ಗೆ ತೀವ್ರವಾದ ಕ್ರಮ ತೆಗೆದುಕೊಳ್ಳಲು ಯೋಚನೆ ಮಾಡಿದೆಯೇ ಎಂಬುದು ನನ್ನ ಪ್ರಶ್ನೆ. ಎರಡನೆಯದಾಗಿ ಹೇಳುವುದಾದರೆ ತಮಗೆಲ್ಲಾ ಗೊತ್ತಿರುವಹಾಗೆ ಭದ್ರಾ ಆಣೆಕಟ್ಟಿನ ರಿಪೇರಿ ಕಾರ್ಯವನ್ನು ನವೆಂಬರ್ ೧ ರಿಂದ ಕೈಗೊಳ್ಳಲು ನೋಟಿಫಿಕೇಷನ್ ಆಗಿದ್ದು ಇನ್ನು ಎರಡು ವರ್ಷ ಅಲ್ಲಿ ಕಬ್ಬು ಬೆಳೆಯಲು ತೊಂದರೆಯಾಗುತ್ತದೆ. ಇದರಿಂದ ಆ ಭಾಗದಲ್ಲಿ ಬರತಕ್ಕ ಸಕ್ಕರೆ ಕಾರ್ಖಾನೆಗಳಿಗೆ ಇನ್ನು ಎರಡು ವರ್ಷ ಕಬ್ಬು ಸಿಗುವುದಿಲ್ಲ. ನೀರು ನಿಲ್ಲಿಸಿ ರಿಪೇರಿ ಕಾರ್ಯ ಕೈಗೊಂಡಾಗ ಕಬ್ಬು ಬೆಳೆದು ಸಕ್ಕರೆ ಕಾರ್ಖಾನೆ.....

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಾನ್ಯ ಸದಸ್ಯರು ಈ ಬಗ್ಗೆ ಚರ್ಚೆ ಮಾಡಿದ್ದಾರೆ. ಕಂಡಾಗಲೆಲ್ಲಾ ಅವರು ಇದನ್ನೇ ಹೇಳುತ್ತಿರುತ್ತಾರೆ. ಅದಕ್ಕೆ ಏನು ಏರ್ಪಾಡು ಮಾಡಬೇಕೋ ಅದನ್ನು ಸರ್ಕಾರ ಮಾಡುತ್ತದೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—೧೯೮೦–೮೧ನೇ ಸಾಲಿನಲ್ಲಿ ೩,೪೩,೦೦,೦೦೦ ರೂಪಾಯಿ ಯನ್ನು ರೈತರಿಗೆ ಬಾಕಿ ಕೊಡಬೇಕಾಗಿದೆ. ಮಿಕ್ಕ ವರ್ಷಗಳಲ್ಲಿ ೨೫ ಕೋಟಿ ರೂಪಾಯಿ ಬಾಕಿ ಕೊಡ ಬೇಕಾಗಿದೆ. ಕಬ್ಬು ತಂದುಕೊಟ್ಟ ರೈತರಿಗೆ ಇಷ್ಟೊಂದು ಬಾಕಿ ಕೊಡದೇ ನಿಲ್ಲಿಸಿಕೊಂಡರೆ ಅವರು ಹೇಗೆ ಕಬ್ಬನ್ನು ಬೆಳೆಯಬೇಕು ? ಈ ಬಾಕಿಯನ್ನು ಎಷ್ಟು ದಿನಗಳಲ್ಲಿ ಕೊಡಿಸುತ್ತೀರಿ ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಏನಾಗುತ್ತದೆಂದರೆ ಕಬ್ಬನ್ನು ರೈತರು ಫ್ಯಾಕ್ಟರಿಗೆ ಸರಬರಾಜು ಮಾಡಿದಾಗ ಸ್ವಲ್ಪ ಅಡ್ವಾನ್ಸ್ ಕೊಡುತ್ತಾರೆ. ಆಮೇಲೆ ಕೊನೆಯಲ್ಲಿ ಮಿಕ್ಕ ಹಣ ಕೊಡುತ್ತಾರೆ. ನಾನು ದಾಖಲೆಗಳನ್ನು ತರಿಸಿ ಯಾರು ಯಾರಿಗೆ ಎಷ್ಟೆಷ್ಟು ಬಾಕಿ ಕೊಡಬೇಕೆಂಬುದನ್ನು ನೋಡಿ ಅದನ್ನು ಕೊಡಿಸುವುದಕ್ಕೆ ಏರ್ಪಾಡು ಮಾಡುತ್ತೇನೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ — ನಷ್ಟವಾಗುವುದಕ್ಕೆ ಕಬ್ಬು ಸಿಗದೇ ಇರುವುದು ಒಂದು ಕಾರಣ ಎಂದು ತಿಳಿಸಿದ್ದೀರಿ. ಅಧಿಕಾರಿಗಳ ಅದಕ್ಷತೆಯಿಂದ ನಷ್ಟವುಂಟಾಗಿದೆ ಎಂಬುದು ನನ್ನ ಗಮನಕ್ಕೆ ಬಂದಿದೆ. ಯಾವ ಯಾವ ಫ್ಯಾಕ್ಟರಿಗೆ ಎಷ್ಟೆಷ್ಟು ಕಬ್ಬು ಬೇಕು ಎಂಬ ಬಗ್ಗೆ ಸರಿಯಾದ ಯೋಜನೆ ಮತ್ತು ಏರ್ಪಾಟು ಮಾಡಿಲ್ಲ. ಉದಾಹರಣೆಗೆ ಶ್ರೀರಾಮ ಸಕ್ಕರೆ ಕಾರ್ಖಾನೆಗೆ ೧೦ ಸಾವಿರ ಎಕರೆ ಕಬ್ಬು ಪ್ರದೇಶ ಇರಬೇಕಾಗಿತ್ತು. ಆದರೆ ಅದಕ್ಕೆ ಒಂದೂವರೆ ಸಾವಿರ ಎಕರೆ ಕಬ್ಬು ಬೆಳೆಯುವ ಪ್ರದೇಶ ಇದೆ. ಈ ರೀತಿ ಸರಿಯಾದ ಯೋಜನೆ ಇಲ್ಲದಿರುವುದರಿಂದ ಮತ್ತು ಅಧಿಕಾರಿಗಳ ಅದಕ್ಷತೆಯಿಂದ ನಷ್ಟ ವಾಗುತ್ತಿದೆ. ಅಲ್ಲವೆ ? ಇದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ? ಮತ್ತು ಅಧಿಕಾರಿಗಳು ಬೇಜವಾಬ್ದಾರರಾಗಿದ್ದರೆ ಅವರ ಮೇಲೆ ಜವಾಬ್ದಾರಿ ಹೊರಿಸಿ ಪಸೂಲಿ ಮಾಡುವುದಕ್ಕೆ ಪ್ರಯತ್ನ ಪಡುತ್ತೀರಾ ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ವಿಚಾರ ಮಾಡಿಸುತ್ತೇನೆ.

ಶ್ರೀ ಡಿ. ಜಯದೇವರಾಜ ಅರಸ್.—ಶ್ರೀರಾಮ ಸಕ್ಕರೆ ಕಾರ್ಖಾನೆಗೆ ಕಬ್ಬು ಸಿಗದೇ ಇರುವುದಕ್ಕೆ ಕಾರಣ ಅಲ್ಲಿ ನೀರಾವರಿ ಯೋಜನೆ ಪೂರ್ತಿಯಾಗದೇ ಇರುವುದು. ಆದ್ದರಿಂದ ಅಲ್ಲಿಗೆ ಹಣ ಒದಗಿಸಿ ಆದಷ್ಟು ಬೇಗ ನೀರಾವರಿ ಯೋಜನೆ ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ? ಅಲ್ಲಿ ನೀರು ಸಿಗದೇ ಕಬ್ಬು ಸಿಗದೇ ಹೋದರೆ ಸಕ್ಕರೆ ಕಾರ್ಖಾನೆಯನ್ನು ಮುಚ್ಚಬೇಕಾದ ಪರಿಸ್ಥಿತಿ ಬರಬಹುದು. ಆದ್ದರಿಂದ ಈ ಬಗ್ಗೆ ಆಲೋಚನೆ ಮಾಡುತ್ತೀರಾ ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಯೋಚನೆ ಮಾಡುತ್ತೇನೆ.

ಪ್ರಶ್ನೆ ಸಂಖ್ಯೆ : ೪೨(೨೬೨) ಸದಸ್ಯರು ಗೈರುಹಾಜರಾಗಿದ್ದರು.

Shore based Steel Plant for Mangalore.

314 SRI MICHAEL B. FERNANDES(Bharathinagar).—Will the Chief Minister be pleased to state.—

(a) whether the Government of Karnataka are aware that there had been during the past about two years some preliminary talks between the Government of India and a few foreign countries for assistance to build more steel plants in India, including a shorebased steel plant at Mangalore :

(b) whether the Government of Karnataka are interested in making attempts to get such a shore-based steel plant for Mangalore particularly in view of the possibility of being able to use Kudure-mukh Iron Ore ?

SRI R. GUNDU RAO (Chief Minister).—

(a) The State Government understand that this matter has been discussed by the Government of India.

(b) Yes.

SRI MICHAEL B. FERNANDES—.I would like to say that while the answer is in the affirmative about that the Governments's interest to make attempts, it has not been mentioned as to what are its attempts. I would just like to ask the Chief Minister, whether he would agree that if the West Coast of Karnataka has to be developed economically, then a shorebased steel plant is necessary. We have to make attempts to use the Kudremukh Iron Ore which we have on our shoulders, because at the moment Iron is not going to lift all of it. Even if Iron lifts all the quantity, we have the capacity to get more than the requirement of Iron. According to the original contract this ore can be used in the shorebased steel mill either by using Cocking Coal imported at cheap rate from Australia or by the direct method using natural gas. It can be got from Bombay through a Pipe line all along the Coastal line.

SRI R. GUNDU RAO.— Instead of asking question, you made a speech. We are really interested in the shorebased steel plant. That is why, we have requested the Government of India and they